# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.615/2014

| | | | |
|---|---|---|---|
| ಚಾಸಾ | **6** | ಪ್ರಾಸಾ | **4** |
| ಹೆಸರು | | ವೆಂಕಟೇಶ್ | |
| ತಂದೆಯ ಹೆಸರು **/** ಗಂಡನ ಹೆಸರು | | ನಾಗರಾಜು | |
| ವಯಸ್ಸು | | **41**ವರ್ಷಗಳು | |
| ಉದ್ಯೋಗ | | ವ್ಯವಸಾಯ | |
| ವಿಳಾಸ | | ಉಯ್ಯಲಪ್ಪನಹಳ್ಳಿ ಗ್ರಾಮ | |

ದಿನಾಂಕ**.24.06.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು**.**

**<u>ಮುಖ್ಯವಿಚಾರಣೆ ಮಾನ್ಯ  ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ಚಾಸಾ**-1** ರಿಂದ ಚಾಸಾ**-5** ರವರು ನನಗೆ ಗೊತ್ತು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

ಸಾಕ್ಷಿಗೆ ಒಂದು  ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ**,** ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮತ್ತು ಅಮಾನತು ಮಹಜರ್  ಆಗಿದ್ದು ಅದನ್ನು ಈಗಾಗಲೇ ನಿಪಿ**-2** ಎಂದು ಗುರುತಿಸಲಾಗಿದ್ದು**,** ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ**-2(**ಸಿ**)** ಎಂದು ಗುರುತಿಸಲಾಯಿತು**.**

ನಿಪಿ-2ಕ್ಕೆ ದಿನಾಂಕ.24.11.2013ರಂದು ಪೊಲೀಸರು ಮಹಜರ್ಗಾಗಿ ಬಂದಾಗ ನನ್ನ ಸಹಿ ಪಡೆದಿರುತ್ತಾರೆ. ಆ ದಿನ ಸ್ಥಳದಲ್ಲಿ ಹಾಜರಿದ್ದ ಚಾಸಾ-1 ರವರು ಪೊಲೀಸರಿಗೆ ಘಟನೆಯ ಬಗ್ಗೆ ಹೇಳಿದರು, ಅದರಂತೆ ನನ್ನ ಸಹಿ ಪಡೆದರು. ಆ ದಿನ ನನ್ನೊಂದಿಗೆ ಚಾಸಾ-3 ಮತ್ತು ಚಾಸಾ-4 ರವರು ಸ್ಥಳದಲ್ಲಿ ಹಾಜರಿದ್ದರು. ಆ ದಿನ ಮಹಜರನ್ನು ಬೆಳಿಗ್ಗೆ 10ಃ30 ರಿಂದ 11ಃ00 ಗಂಟೆಯ ವರೆಗೂ ತಯಾರಿಸಲಾಗಿರುತ್ತದೆ.

<u>ಪಾಟೀ ಸವಾಲುಃ- ಆರೋಪಿತರ ಪರ ವಕೀಲರಾದ ಶ್ರೀ ಸಿಎಂಜೆ ರವರಿಂದಃ-</u>

ಮಹಜರ್ ಮಾಡುವ ಕಾಲಕ್ಕೆ ನನ್ನನ್ನು ಯಾರು ಕರೆಯಲಿಲ್ಲ, ನಾನು ಅಲ್ಲಿಯೇ ಇದ್ದೆ. ನಾನು ಅಲ್ಲಿ ಇದ್ದಾಗ ಬೆಳಿಗ್ಗೆ 10ಃ30 ರಿಂದ 11 ಗಂಟೆಯಾಗಿರಬಹುದು. ಪೊಲೀಸರು ಆ ದಿನ ಸ್ಥಳಕ್ಕೆ ಎಷ್ಟು ಗಂಟೆಗೆ ಬಂದರು ಎಂದು ಹೇಳಲು ಆಗುವುದಿಲ್ಲ. ಆ ದಿನ ಬಂದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಬರೆದ ಸಂಗತಿಗಳನ್ನು ಪೊಲೀಸರು ನನಗೆ ಖುದ್ದಾಗಿ ಓದಿ ತಿಳಿಸಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಪೊಲೀಸರು ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿ. ಮಹಜರ್ ಮಾಡಿದ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ.

ಚಾಸಾ-1 ಮತ್ತು ನಾನು ಸ್ನೇಹಿತರು ಎಂದರೆ ಸರಿ. ಚಾಸಾ-1 ರವರೆ ನನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಸ್ಥಳದಲ್ಲಿ ಹಾಜರು ಇರಲಿಲ್ಲ ಮತ್ತು ನಿಪಿ-2ಕ್ಕೆ ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

<u>ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಮರುವಿಚಾರಣೆಗಾಗಿ ಅನುಮತಿ ಕೋರಿರುತ್ತಾರೆ. ಯಾವುದೇ ಸಕಾರಣಗಳು ಇಲ್ಲದ ಕಾರಣ ಅವರ ಕೋರಿಕೆಯನ್ನು ತಳ್ಳಿ ಹಾಕಲಾಯಿತು.</u>

<u>ಮರುವಿಚಾರಣೆಃ- ಇಲ್ಲ</u>

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**